IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಶಿವಭಕ್ತ ಹರಿಶ್ಚಂದ್ರ

**ಚಾಣಕ್ಯ ರಾಜ್, ಎಂ[1] ಮತ್ತು ಪ್ರಹ್ಲಾದ ರೆಡ್ಡಿ, ಬಿ[2]**

1. ಸಂಶೋಧನಾರ್ಥಿ, ಎಸ್.ಜೆ.ಬಿ.ಸಿ.ಎಂ.ಎಸ್ ಕನ್ನಡ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಕೆಂಗೇರಿ, ಬೆಂಗಳೂರು.
2. ಪ್ರಾಧ್ಯಾಪಕರು, ಎಸ್.ಜೆ.ಬಿ.ಸಿ.ಎಂ.ಎಸ್ ಕನ್ನಡ ಸಂಶೋಧನಾ ಕೇಂದ್ರ, ಮೈಸೂರು ವಿಶ್ವವಿದ್ಯಾನಿಲಯ, ಕೆಂಗೇರಿ, ಬೆಂಗಳೂರು.

**ಸಾರಲೇಖ**

ಕವಿ ರಾಘವಾಂಕ ರಚಿಸಿದ 'ಹರಿಶ್ಚಂದ್ರ ಚಾರಿತ್ರ' ಕೃತಿಯಲ್ಲಿ ಹರಿಶ್ಚಂದ್ರನ ಶಿವಭಕ್ತಿಯು ಧ್ವನಿಪೂರ್ವಕವಾಗಿ ಚಿತ್ರಿತವಾಗಿದೆ. ಕವಿಯು ಹರಿಶ್ಚಂದ್ರನೊಬ್ಬ ಶಿವನ ಮಹಾಭಕ್ತನೆಂದು ಅಥವಾ ಸತ್ಯನಿಷ್ಠನೆಂದು ಒಂದು ಸಂಪೂರ್ಣ ಷಟ್ಪದಿಯಲ್ಲಿ ಸ್ಪಷ್ಟವಾಗಿ ಹೇಳಿಲ್ಲವೆಂದು ಅಭಿಪ್ರಾಯವೂ ವ್ಯಕ್ತವಾಗಿದೆ. ಪ್ರಸ್ತುತ ಲೇಖನವು ರಾಘವಾಂಕನು ಹರಿಶ್ಚಂದ್ರ ಶಿವಭಕ್ತಿಯನ್ನು ವಾಚ್ಯವಾಗಿ ಹೇಳದಿದ್ದರೂ, ಕಾವ್ಯದ ವಿವಿಧ ಸಂದರ್ಭಗಳು ಮತ್ತು ಘಟನೆಗಳ ಮೂಲಕ ಧ್ವನಿಪೂರ್ವಕವಾಗಿ ಹೇಗೆ ಅಭಿವ್ಯಕ್ತಪಡಿಸಿದ್ದಾನೆಂಬುದನ್ನು ಕುರಿತು ವಿಶ್ಲೇಷಿಸುತ್ತದೆ.

**ಪ್ರಮುಖ ಪದಗಳು:** ರಾಘವಾಂಕ, ಹರಿಶ್ಚಂದ್ರ, ಶಿವಭಕ್ತಿ–ನಿರೂಪಣೆ

ಕನ್ನಡ ಸಾಹಿತ್ಯದಲ್ಲಿ ಹರಿಶ್ಚಂದ್ರ ಕಥೆಯನ್ನು ಪ್ರಸಿದ್ಧಗೊಳಿಸಿದ ಖ್ಯಾತಿ ರಾಘವಾಂಕನಿಗೆ ಸಲ್ಲುತ್ತದೆ.ಈ ಕಾವ್ಯದಲ್ಲಿ ಚಿತ್ರಿತವಾಗಿರುವ ಹರಿಶ್ಚಂದ್ರನ ವ್ಯಕ್ತಿತ್ವವನ್ನು ಹಾಗೂ ಕವಿ ರಾಘವಾಂಕನನ್ನು ವಿಮರ್ಶೆಯೆಂಬ ಒರೆಗಲ್ಲಿನಲ್ಲಿ ಉಜ್ಜಿ ಪರೀಕ್ಷೆ ಮಾಡಲಾಗಿದೆ.ಆ ಪರೀಕ್ಷೆಯಿಂದ ಬಂದಿರುವ ಹಲವು ಫಲಿತಗಳಲ್ಲಿ ಹರಿಶ್ಚಂದ್ರನ ಶಿವಭಕ್ತಿಯ ಬಗ್ಗೆ ಬಂದಿರುವ ಫಲಿತವೊಂದನ್ನು ಆಯ್ಕೆಮಾಡಿಕೊಂಡು ಈ ಲೇಖನದಲ್ಲಿ ಚರ್ಚಿಸಲಾಗಿದೆ. ಹರಿಶ್ಚಂದ್ರನು ಸತ್ಯಸಂಧತೆಗೆ ಹೆಸರಾದವನು.ಅದರೊಟ್ಟಿಗೆಯೆ ಆತ ಶಿವಭಕ್ತನೂ ಹೌದು ಎಂಬ ಸಹಜ ಭಾವ ಸಹೃದಯರಲ್ಲಿ ಮೂಡಿಬಂದಿದೆ.ಏಕೆಂದರೆ ಕಥೆಯ ಕೊನೆಯಲ್ಲಿ ಆತನಿಗೆ ಶಿವನ ಸಾಕ್ಷಾತ್ಕಾರವಾಗುತ್ತದೆ.ಆದರೆ ರಾಘವಾಂಕನ "ಹರಿಶ್ಚಂದ್ರ ಚಾರಿತ್ರದಲ್ಲಿ ಅವನು ಭಕ್ತ ಎಂದು ನಿರೂಪಿಸುವ ಒಂದು ಪೂರ್ಣ ಷಟ್ಪದಿಯೂ ಕಾಣುವುದಿಲ್ಲ. ಅವನ ರಾಜತನದ ವೈಭವ ಹೇಳುವಾಗ ಎಲ್ಲೋ ಒಂದೆರಡು ಶಬ್ದಗಳಲ್ಲಿ ಅವನ ಭಕ್ತಿ, ಶಿವ ಪೂಜೆಯ ಉಲ್ಲೇಖಗಳು ಬರುತ್ತವೆ."[1] "ಹರಿಶ್ಚಂದ್ರ ಶಿವಭಕ್ತನೆಂದು ಹೇಳುವ, ಅವನ ವ್ಯಕ್ತಿತ್ವದಲ್ಲಿ ಸತ್ಯವಿದೆ ಎಂದು ಹೇಳುವ,ಅರ್ಧ ಷಟ್ಪದಿಯು ಈ ಕಾವ್ಯದಲ್ಲಿ ಕಾಣುವುದಿಲ್ಲ."[2]ಎಂಬ ಅಭಿಪ್ರಾಯ ವ್ಯಕ್ತವಾಗಿದೆ.ಮೇಲ್ನೋಟಕ್ಕೆ ಈ ಮಾತುಗಳನ್ನು ನಿರಾಕರಿಸಲು ಸಾಧ್ಯವಿಲ್ಲ. ಹರಿಶ್ಚಂದ್ರನ ಶಿವ ಭಕ್ತಿಯನ್ನಾಗಲೀ ಸತ್ಯತನವನ್ನು ನಿರೂಪಿಸುವ ಒಂದು ಪೂರ್ಣ ಷಟ್ಪದಿಯು ವಾಚ್ಯ ರೂಪದಲ್ಲಿ ಕಾಣಸಿಗುವುದಿಲ್ಲ. ಆದರೆ ಸಮಗ್ರ ಕಾವ್ಯವೇ ಆತನ ಸತ್ಯಸಂಧತೆಯನ್ನು ನಿರೂಪಿಸಲು ಸಜ್ಜಾಗಿರುವಾಗ ಒಂದು ಪೂರ್ಣ ಷಟ್ಪದಿಯಲ್ಲಿ ವಾಚ್ಯಾರ್ಥದಲ್ಲಿ

ಹೇಳುವ ಅಗತ್ಯತೆ ಕವಿ ರಾಘವಾಂಕನಿಗೆ ಕಂಡು ಬರಲಿಲ್ಲ ಎನಿಸುತ್ತದೆ. ಅಂತೆಯೇ ಕಾವ್ಯದಲ್ಲಿ ವ್ಯಂಗ್ಯಾರ್ಥದಲ್ಲಿ ನಿರೂಪಿಸಲ್ಪಟ್ಟಿರುವ ಹರಿಶ್ಚಂದ್ರನ ಶಿವಭಕ್ತಿಯನ್ನು ಸಹ ಕೇವಲ ಒಂದು ಷಟ್ಪದಿಯಲ್ಲಿ ವಾಚ್ಯವಾಗಿ ಹೇಳಲು ರಾಘವಾಂಕನಿಗೆ ಮನಸ್ಸಾಗಿರಲಿಲ್ಲವೆನಿಸುತ್ತದೆ.ಮತ್ತೊಂದೆಡೆ ಹರಿಶ್ಚಂದ್ರನನ್ನು ಭಕ್ತ ಎಂದು ನಿರೂಪಿಸುವ ಒಂದು ಪೂರ್ಣ ಷಟ್ಪದಿಯೂ ಕಾಣದಿದ್ದರೂ ಸಹ ಆತನ ಭಕ್ತಿಯನ್ನು ನಿರೂಪಿಸುವ ಎರಡು ಪೂರ್ಣ ಷಟ್ಪದಿಯು ಕಾವ್ಯದಲ್ಲಿ ಕಾಣ ಸಿಗುತ್ತದೆ.

ಮೊದಲನೆಯದು ಹರಿಶ್ಚಂದ್ರ ಬೇಟೆಯಾಡುತ್ತಾ ವಸಿಷ್ಠರ ಆಶ್ರಮ ತಲುಪಿದಾಗ ವಿರೂಪಾಕ್ಷನ ದರ್ಶನ ಪಡೆಯುತ್ತಾನೆ.ಆಗ ಒಂದು ಪೂರ್ಣ ಷಟ್ಪದಿಯಲ್ಲಿ ವಿರೂಪಾಕ್ಷನನ್ನು ಸ್ತುತಿಸಲಾಗಿದೆ.

ತ್ರಾಹಿ ಮಾಂ ಜಗದುದಯರಕ್ಷ ಶಿಕ್ಷಾಧ್ಯಕ್ಷ

ತ್ರಾಹಿ ಮಾಂ ಶರಣಜನದಘಜ್ವಲಿತ ಭಾಳಾಕ್ಷ

ತ್ರಾಹಿ ಮಾಂ ಸಕಲ ಧರ್ಮಾಕಾರಮಯವೆನಿಪ ಪುಂಗವೇಂದ್ರಾಕ್ಷಪಕ್ಷ

ತ್ರಾಹಿ ಮಾಂ ಶಿಖಿಮರುತ ವಂದಿತ ಯಕ್ಷ

ತ್ರಾಹಿ ಮಾಂ ಭಕ್ತಕುಲವಾಂಛಿತದ ಸುರವೃಕ್ಷ

ತ್ರಾಹಿ ಮಾಂ ಶ್ರೀ ಗುರುವಿರೂಪಾಕ್ಷ ಶರಣೆನುತ್ತೆಱಗಿದಂ ಭೂನಾಥನು (5 –79)

ಆದರೆ ಇದರ ಮುಂದಿನ ಷಟ್ಪದಿಯು ಹರಿಶ್ಚಂದ್ರನ ಭಕ್ತಿ ಪರವಶತೆಯನ್ನು ವರ್ಣಿಸುತ್ತದೆ. ಹರಿಶ್ಚಂದ್ರನ ಅಭಿಪ್ರಾಯದಂತೆ –ಶ್ರೀ ಗುರು ವಿರುಪಾಕ್ಷ ತಂದೆ ಇದ್ದಂತೆ ಅಂತಹ ತಂದೆಯ ದರ್ಶನ ಪಡೆಯುತ್ತಿದ್ದಂತೆಯೇ

ನೋಡಿ ಪರಮಾನಂದ ಮೂಡಿ ಸಂತಸದೊಳೋ

ಲಾಡಿ ಪುಳಕಸ್ವೇದ ತೊದಳು ಕಂಪನ ಮಱವೆ

ಗೂಡಿ ಮನದೊಳು ತನುವಿನೆಚ್ಚಱೆಂದುಬ್ಬಿ ಹಾರೈಸಿ ಹರುಷದ ಸುಖದಲಿ

ಹಾಡಿ ನಾನಾ ಸ್ನಪನ ಯಕ್ಷಕರ್ದಮ ಪುಷ್ಪ

ಗಾಡಿವಡೆಯಲು ಮಹಾರುದ್ರಾಭಿಷೇಚನದ

ಜೋಡಿಯಿಂ ಪಂಪಾಂಭಿಕಾಪತಿಯ ಪೂಜೆಮಾಡಿದ ಹರಿಶ್ಚಂದ್ರನೃಪನು (5–80)

ಈ ರೀತಿ ಭಕ್ತಿಪರಶನಾಗಿ ಪೂಜೆ ಮಾಡುತ್ತಾನೆ. ಮುಂದುವರೆದು,

ಧೂಪದಾರತಿಯ ಸಕಲವಾದ್ಯರವದೊಳು ಮಾಡಿ

ದಾಪ್ಪೊತ್ತು ಸುರುಚಿರಸುಧಾನಿವೇದ್ಯವನಿತ್ತು

ಕಾಪಾಲಿಗೆಸೆವ ಕರ್ಪುರ ವೀಳೆಯಂಗೊಟ್ಟು ರತ್ನದಾರತಿಯನೆತ್ತಿ

ಶ್ರೀಪಾರ್ವತೀಪತಿಗೆ ಪ್ರೀತ್ಯರ್ಥವಾಗಿ....(5–81)

ಎಂಬ ಪೂಜಾ ವರ್ಣನೆ ಪಂಚಮ ಸ್ಥಲದಲ್ಲಿ ಬರುತ್ತದೆ.

ಎರಡನೆಯದಾಗಿ ಹರಿಶ್ಚಂದ್ರಾದಿಗಳು ಕಾಶಿಗೆ ಆಗಮಿಸಿದಾಗ ಅಲ್ಲಿ ಕಾಶಿವಿಶ್ವನಾಥನ ದರ್ಶನವನ್ನು ಪಡೆಯುತ್ತಾರೆ.ಆಗಲೂ ಸಹ ವಿಶ್ವಪತಿಯನ್ನು ಕಂಡು

ಜಯ ಜನಾರ್ಧನ ವಂದ್ಯ ಜಯ ಜಲಭಜನ ಪೂಜ್ಯ

ಜಯ ಜಂಭರಿಪುನಾಥ ಜಯ ಪೂಜನಾತೀತ

ಜಯ ಜಾತವೇದಾಕ್ಷ ಜಯ ಜಾಹ್ನವೀಮುಕುಟ ಜಯ ಜರಾಮರಣದೂರ

ಜಯಜಯ ಜಿತಾನಂಗ ಜಯಜಯ ಜಗತ್ರಾಣ

ಜಯಜಯ ಜಿನಾರಾತಿ ಜಯಜಯ ಜಯಾವರಣ

ಜಯಯೆಂದು ಪೊಗಳುತಿಹ ಜೋಕೆಯಿಂ ಮೆಱೆವ ಜಗದೀಶನಂ ನಿಟ್ಟಿಸಿದನು (10–40)

ವಿಶ್ವನಾಥನನ್ನು ನೋಡುತ್ತಾ ಭಕ್ತಿರಸದಿಂದ ಪುಳಕಗೊಳ್ಳುತ್ತಾನೆ.

ನೋಡಿ ಪರಮಾನಂದ ಮೂಡಿ ಸುಖರಸದೊಳೋ

ಲಾಡಿ ಕೀರ್ತಿಸಿ ಹರಸಿ ಹಾಡಿ ಸದ್ಭಕ್ತಿಯಂ

ಬೇಡಿ ಮನದೊಳಗೆ ಮಾತಾಡಿ ನೆಱೆ ಬಿನ್ನಹಂ ಮಾಡಿ ಪ್ರಸಾದಫಲವ

ಸೂಡಿ ಪರಿಣಾಮವಂ ಮಾಡಿ ದುಸ್ಥಿತಿಯನೀ

ಡಾಡಿ ಭವಜಲವನೀಸಾಡಿ ಬಲ್ಪಿಂ ಮನಂ

ಮೂಡಿ ಬೀಳ್ಕೊಂಡು ಸಂತಸದಿ ಮರಳಿದನುಳಿದ ಲಿಂಗಂಗಳಂ ನೋಡುತ (10–41)

ಹರಿಶ್ಚಂದ್ರ ಈ ರೀತಿ ಭಕ್ತಿ ಪರವಶನಾಗಿದ್ದು ಯಾವ ಸಂದರ್ಭದಲ್ಲಿ ಎಂಬುದನ್ನು ಅರಿತರೆ, ಆತನ ಗಾಢವಾದ ಶಿವಭಕ್ತಿ ತನ್ನಷ್ಟಕ್ಕೆ ತಾನೇ ನಿರೂಪಿಸಲ್ಪಡುತ್ತದೆ. ಹರಿಶ್ಚಂದ್ರ ಅಯೋಧ್ಯೆಯಿಂದ ಕಾಶಿಗೆ ಬರುವ ಮಾರ್ಗದಲ್ಲಿ ವಿಶ್ವಾಮಿತ್ರನೊಡ್ಡಿದ ಕಡು ಘೋರ ಕಷ್ಟಗಳನ್ನು ಅನುಭವಿಸಿ ಅಕ್ಷರಶಃ ಬಳಲಿರುತ್ತಾನೆ. ಮೇಲಾಗಿ ವಿಶ್ವಾಮಿತ್ರ ನೀಡಿರುವ 48 ದಿನಗಳ ಅವಧಿಯ ಕೊನೆಯ ದಿನದಂದು ಕುಟುಂಬ ಸಮೇತನಾಗಿ ಕಾಶಿಗೆ ತಲುಪಿದ್ದಾನೆ.ಬಹು ಸುವರ್ಣಯಾಗದ ದಕ್ಷಿಣಾ ಹಣವನ್ನು ಹೊಂದಿಸಲು ಅದು ಕೊನೆಯ ದಿನವಾಗಿರುತ್ತದೆ.ಹರಿಶ್ಚಂದ್ರನಿಗೆ ಆ ದಿನದ ಪ್ರತಿಕ್ಷಣವೂ ಆತನ ಅಸ್ತಿತ್ವದ ಮತ್ತು ಅಸ್ಮಿತೆಯ ಅಳಿವು ಉಳಿವನ್ನು ನಿರ್ಧರಿಸುವ ಮಹತ್ತರ ಕ್ಷಣಗಳಾಗಿರುತ್ತದೆ.ಹೀಗಿದ್ದರೂ ಸಹ ಹರಿಶ್ಚಂದ್ರ ಅವೆಲ್ಲವನ್ನೂ ಮರೆತನೆಂದರೆ ಅಥವಾ ವಿಶ್ವನಾಥನ ದರ್ಶನ ಮರೆಸುವಂತೆ ಮಾಡಿತೆಂದರೆ ಆತನ ಶಿವಭಕ್ತಿಯನ್ನು ಶಿವನಿಷ್ಠೆಯನ್ನು ಅಳೆಯಲು ಸಾಧ್ಯವೇ? ಅಷ್ಟೇ ಅಲ್ಲದೆ ಹರಿಶ್ಚಂದ್ರನು ಕಾಶಿಯಲ್ಲಿರುವ ಕಾಮೇಶ, ವಿಭಾಂಡೇಶ್ವರ, ದಕ್ಷಿಣೇಶ್ವರನ ದರ್ಶನವನ್ನು ಮಾಡುತ್ತಾ

ಗಡಿಗೆಟ್ಟ ಲಿಂಗಂಗಳೊಪ್ಪಕ್ಕೆ ಭೋಗಂಗ

ಳಡಕಕ್ಕೆ ಮಂಗಳದ ಮಸಕಕ್ಕೆ ರಚನೆಗಳ

ಸಡಗರಕೆ ಬೆಱಗಾಗುತೆಲ್ಲಾ ನಿರೋಧಮಂ ಮರೆದು ನೋಡುತ್ತರಸನು

ನಡೆಯುತಿರಲಿದಿರೆದ್ದು....(10–45) ಎಂದು ಕವಿ ಹೇಳುತ್ತಾನೆ.ಇವೆಲ್ಲವೂ ಹರಿಶ್ಚಂದ್ರನ ಶಿವ ಭಕ್ತಿಯ ಗಾಢತೆಯನ್ನು ಧ್ವನಿಪೂರ್ವಕವಾಗಿ ಸಾಬೀತು ಪಡಿಸುತ್ತದೆ.

ಒಂದು ಪಕ್ಷ "ಐದನೆಯ ಸ್ಥಲದಲ್ಲಿ ಹಂಪೆಯ ವಿರೂಪಾಕ್ಷ ಸ್ವಾಮಿಯನ್ನು ಪ್ರವಾಸಿಗರು ದರ್ಶನ ಪಡೆಯುವಂತೆ ಹರಿಶ್ಚಂದ್ರನು ಪಡೆದು ಹೋದನು"[3] ಎಂಬ ಮಾತನ್ನು ಒಪ್ಪೋಣ. ಹಂಪಿಗೆ ಹರಿಶ್ಚಂದ್ರ ತೆರಳಿದಾಗ ಆತನಿಗೆ ಕಷ್ಟಗಳು ಎದುರಾಗಿರಲಿಲ್ಲ. ಸಕಲ ಸಂಪತ್ತುಗಳಿತ್ತು. ಹಾಗಾಗಿ ಪ್ರವಾಸಿಗನಂತೆಯೇ ದರ್ಶನ ಪಡೆದನು ಎಂಬುದನ್ನು ಅರೆಕ್ಷಣಕ್ಕಾದರೂ ಒಪ್ಪಬಹುದು. ಆದರೆ ಕಾಶಿಗೆ ಹರಿಶ್ಚಂದ್ರ ಪ್ರವಾಸಿಗನಾಗಿ ಬರಲಿಲ್ಲ. ಎಲ್ಲವನ್ನೂ ಕಳೆದುಕೊಂಡು ದೇಸಿಗನಾಗಿ ಆಗಮಿಸಿದ್ದ. ಆತನಿಗೆ ವಿಶ್ವಾಮಿತ್ರನ ಋಣ ತೀರಿಸಬೇಕು ಮತ್ತು ಆ ಮೂಲಕ ಸತ್ಯನಿಷ್ಠನಾಗಿರಬೇಕು ಎಂಬ ದೊಡ್ಡ ಹೊಣೆಗಾರಿಕೆ ಮತ್ತು ಅಳಿವು ಉಳುವಿನ ಅನಿವಾರ್ಯ ಪರಿಸ್ಥಿತಿಯಲ್ಲಿದ್ದನು. ಇಂತಹ ಸಂದರ್ಭದಲ್ಲೂ ಸಹ ಶಿವಭಕ್ತಿಯಲ್ಲಿ ಪರವಶನಾಗಿರುವುದು ಆತನ ನಿಜ ಭಕ್ತಿಯನ್ನು ತೋರಿಸುತ್ತದೆ.

ಹರಿಶ್ಚಂದ್ರನನ್ನು ಭಕ್ತ ಎಂದು ನಿರೂಪಿಸುವ ಅನೇಕ ಸನ್ನಿವೇಶಗಳಿವೆ.ಆದರೆ ರಾಘವಾಂಕನು ಅವುಗಳನ್ನು ಬಿಂಬಿಸಲು ಹೋಗಿಲ್ಲ.

“ಎಲ್ಲರೊಡನೆ ಜಲಕೇಳಿ ಆಡಿದ್ದಾಯಿತು. ರಾಜ ಹೀಗೆ ಅವನು ಅಚ್ಚ ಸುಖವನ್ನು ಪಟ್ಟ ಮೇಲೆ ಶಿವ ಪೂಜಾ ಸುಖವನ್ನು ಬಯಸಿ ಮನವನ್ನು ಏಕಾಗ್ರ ಗೊಳಿಸಿದನು”.[4] ಹೀಗೆ ಹೇಳಿರುವಷ್ಟು ಹರಿಶ್ಚಂದ್ರನ ಭಕ್ತಿಯು ಸರಳವಾಗಿಲ್ಲ. ಏಕೆಂದರೆ ಹರಿಶ್ಚಂದ್ರ ಯುವತಿಯರೊಡನೆ ಸಂತೋಷದಿಂದ ಜಲ ಕ್ರೀಡೆಯಲ್ಲಿ ತೊಡಗಿರುವಾಗಲೇ

ಕಂತುಮದಹರನ ಪೂಜಾಸುಖಕ್ಕೆಳೆಸಿ ತ

ನ್ನಂತಃಕರಣವೆಲ್ಲವನುವೊಂದುಗೂಡಿಸಿಕೊಂ

ಡಂತಲ್ಲಿ ಯುವತಿಯರ ಕೂಡೆ ಮನವೆಳಸಿ ಜಲಕ್ರೀಡೆಗುದ್ಯೋಗಿಸಿದನು (3–53)

ಅಂದರೆ ಹರಿಶ್ಚಂದ್ರ ಶಿವನ ಪೂಜಾ ಸುಖವನ್ನು ಬಯಸಿ ಮನವನ್ನು ಏಕಾಗ್ರತೆಗೊಳಿಸಿದ್ದನು. ಆತ ಯುವತಿಯರೊಂದಿಗೆ ಮೇಲ್ನೋಟಕ್ಕೆ ಮಾತ್ರ ಜಲ ಕ್ರೀಡೆಗೆ ತೊಡಗಿ ಅಂತರಂಗದಲ್ಲೆಲ್ಲಾ ಶಿವನ ಪೂಜೆಗೆ ಯೋಚಿಸುತ್ತಿತ್ತು ಎಂದು ಅರ್ಥೈಸಿಕೊಳ್ಳಲು ಅವಕಾಶವಿದೆ. ಜಲಕ್ರೀಡೆ ಆಡಿದ ಬಳಿಕ ಪೊಱಮಟ್ಟು ದಿವ್ಯಾಂಬರಗಳನುಟ್ಟು

ಎಳಲತೆಯ ತಡಿಯ ತಂಪಿನೊಳು ಕುಳ್ಳಿರ್ದು ಭೂ

ತಳಪತಿ ಶಿವಾರ್ಚನೆಯ ಪುಷ್ಪಾಚಯಕೆ ಮಾನಿನಿಯರ್ಗೆ ಬೆಸನಿತ್ತನು(3–54)

ಹೀಗೆ ಹರಿಶ್ಚಂದ್ರನಿಂದ ಆದೇಶಿಸಲ್ಪಟ್ಟ ಯುವತಿಯರು

ಇಡದ ಹಸುರಿಡದ, ಕೌರಿಡದ ಬೆಳುಪಿಡದ ಕೆಂ

ಪಿಡದ ಬಿಸುಪಿಡದ ಚೆಪ್ಪರಳದೆಸಳೊಡೆಯದೊಳ

ಗುಡುಗಿರದ ಕುಡಿ ಮುರುಟ ಕೆಲಹಿಗ್ಗದೋರಂತೆ ಬಿಸಿಲು ನೆಳಲಾವರಿಸದ

ಅಡಿಗಳಿಂದಳಿ ತುಳಿಯದನಿಲನಲುಗದ ಮಂಜು

ಹೊಡೆಯದೇಕಾಕಿಯಾಗಿರದನ್ಯ ಕುಸುಮದೊಳು

ತೊಡರದರೆಬಿರಿದರಲನಾಯ್ದಾಯ್ದು ತಿಱಿದರಂದವನಿಪನ ಶಿವಪೂಜೆಗೆ (3–55)

ಇಲ್ಲಿ ಯುವತಿಯರು ಹರಿಶ್ಚಂದ್ರನ ಶಿವ ಪೂಜೆಗೆ ಬಹಳ ಎಚ್ಚರಿಕೆಯಿಂದ ಹೂವುಗಳನ್ನು ಆರಿಸಿ ತಂದಿರುವುದಕ್ಕೆ ಕಾರಣಗಳನ್ನು ವಿಶ್ಲೇಷಿಸಬೇಕಾಗುತ್ತದೆ.

- ಪ್ರಾಯಶಃ ಹರಿಶ್ಚಂದ್ರನು ಪ್ರತಿನಿತ್ಯದ ಶಿವ ಪೂಜೆಗೆ ಈ ರೀತಿ ಅತ್ಯಂತ ಮಡಿವಂತಿಕೆಯ ಹೂವುಗಳನ್ನು ಅರ್ಪಿಸುತ್ತಿರಬಹುದು. ಶಿವನಿಗೆ ಸಲ್ಲಬೇಕಾದ ಹೂವಿನ ಬಗ್ಗೆಯೇ ಇಷ್ಟು ಎಚ್ಚರ ವಹಿಸುವ ಗುಣವಿರುವ ಹರಿಶ್ಚಂದ್ರ, ಇನ್ನು ಶಿವನ ಬಗ್ಗೆ ಎಷ್ಟು ಎಚ್ಚರಿಕೆಯಿಂದ ನಡೆದುಕೊಳ್ಳಬಹುದು ಎಂದು ಊಹಿಸಲಾವಕಾಶವಿದೆ.
- ಅಥವಾ ಯುವತಿಯರೇ ಹರಿಶ್ಚಂದ್ರನು ಶಿವನ ಮೇಲೆ ಹೊಂದಿರುವ ಭಕ್ತಿಯ ಗಾಢತೆಯನ್ನು ಅರಿತವರಾಗಿರಬೇಕು. ಆ ಗಾಢತೆಯನ್ನು ಅರಿತವರಾಗಿದ್ದರಿಂದಲೇ ಅದಕ್ಕೆ ತಕ್ಕದಾದ ಅತ್ಯಂತ ಮಡಿವಂತಿಕೆಯ ಹೂವುಗಳನ್ನು ಆರಿಸಿ ತಂದಿರಬಹುದು.
- ಅಥವಾ ಹರಿಶ್ಚಂದ್ರ ರಾಜನ ಜೊತೆಯಲ್ಲೇ ಸದಾ ಇರುವುದರಿಂದ ಹರಿಶ್ಚಂದ್ರನಂತೆ ಯುವತಿಯರು ಸಹ ಅಮಿತ ಶಿವಭಕ್ತೆಯರಾಗಿ ಪರಿವರ್ತನೆಯಾಗಿರಲೂ ಬಹುದು. ಅವರ ಶಿವನ ಮೇಲಿನ ಭಕ್ತಿಯೇ ಮಡಿವಂತಿಕೆಯ ಹೂವುಗಳನ್ನು ಆಯ್ದು ತರುವಂತೆ ಪ್ರೇರೇಪಿಸಿರಬಹುದು.

ಈ ರೀತಿ ಹೇಗೆ ವಿಶ್ಲೇಷಿಸಿದರೂ ಸಹ ಹರಿಶ್ಚಂದ್ರನ ಶಿವಭಕ್ತಿಯು ಧ್ವನಿಸುವುದನ್ನು ಕಾಣಬಹುದಾಗಿದೆ.

ಈ ಸನ್ನಿವೇಶ ಅಲ್ಲಿಗೆ ನಿಲ್ಲದೆ ಮುಂದುವರೆಯುತ್ತದೆ. ಯುವತಿಯರು ಹೂವುಗಳನ್ನು ಆಯ್ದು ತಂದು ಹಾರವನ್ನು ಕಟ್ಟಿ ಹರಿಶ್ಚಂದ್ರನಿಗೆ ಒಪ್ಪಿಸುತ್ತಾರೆ. ಪಂಚವಾದ್ಯಗಳು ಮೊಳಗುತ್ತವೆ. ಮಂಗಳ ಗೀತೆಗಳನ್ನು ಹಾಡಲಾಗುತ್ತದೆ. ದೀಪಾರತಿ ಮಾಡಲಾಗುತ್ತದೆ. ಹರಿಶ್ಚಂದ್ರನು ಅತ್ಯಂತ ಒಲವಿನಿಂದ ಲಿಂಗಾರ್ಚನೆಯನ್ನು ಮಾಡಿದನು ಎಂದು ರಾಘವಾಂಕ ವರ್ಣಿಸಿದ್ದಾನೆ.

ಸಂತೋಷಮಂ ಸಲಹುವಂತೆ ಭಾಗ್ಯವನೋವು

ವಂತೆ ಸುಖಮಂ ಸಾಗಿಪಂತೆ ಮುಕ್ತಿಯನು ಹೊರೆ

ವಂತೆ ಮಂಗಳವ ಮನ್ನಿಸುವಂತೆ ಪುಣ್ಯಮಂ ಪುಟವಿಕ್ಕುವಂತೆ ತಳಿರ

ತಿಂತಿಣಿಯ ಶೈತ್ಯಶಾಲೆಯೊಳೀಶನಂ ಶಿವನ

ನಂತಕಾರಿಯನಭವನಂ ಚಿತ್ತದಾಸಱಿಳಿ

ವಂತೆ ಹಸ್ತದ ಹಸಂ ಹರಿವಂತೆ ಪೂಜಿಸಿದನೋಜೆಯಿಂ ರಾಜೇಂದ್ರನು (3–58)

ಕವಿಯು ಈ ಒಂದು ಪೂರ್ಣ ಷಟ್ಪದಿಯಲ್ಲಿ ಹರಿಶ್ಚಂದ್ರನು ಶಿವನನ್ನು ತನ್ನ ಸಂತೋಷ, ಭಾಗ್ಯ, ಸುಖ, ಮುಕ್ತಿ, ಮಂಗಳ, ಪುಣ್ಯ ಎಂದು ಭಾವಿಸಿ ಪೂಜಿಸುವುದನ್ನು ವರ್ಣಿಸುವುದರ ಮೂಲಕ ಹರಿಶ್ಚಂದ್ರನ ಶಿವ ಭಕ್ತಿಯನ್ನು ತಿಳಿಸಿದ್ದಾನೆ. ಹರಿಶ್ಚಂದ್ರನು ಸಕಲ ಪರಿವಾರದವರೊಡನೆ ಜಲಕ್ರೀಡೆ ಆಡುವಾಗಲೂ ಸಹ ತನ್ನ ಶಿವನಿಷ್ಠೆಯನ್ನು ಮರೆಯುವ ವ್ಯಕ್ತಿತ್ವದವನಲ್ಲ ಎಂದು ಬಹಳ ಧ್ವನಿಪೂರ್ವಕವಾಗಿ ಕವಿ ತಿಳಿಸಿದ್ದಾನೆ.

ಇದಲ್ಲದೆ ರಾಘವಾಂಕನು ಹರಿಶ್ಚಂದ್ರನ ನಿತ್ಯ ಬೆಳಗ್ಗಿನ ದಿನಚರಿಯ ಪಟ್ಟಿಯನ್ನು ನೀಡಿದ್ದಾನೆ. ಅದರಲ್ಲಿ ಶಿವಲಿಂಗಪೂಜೆಯನ್ನು ಮಾಡುವುದೂ ಸಹ ಒಂದಾಗಿದೆ.

ಮುದದೊಳೆದ್ದು ಶರೀರಧರ್ಮಮಂ ಚರಿಸಿ ಕರ

ಪದಮುಖಪ್ರಕ್ಷಾಳನಂಗೆಯ್ದು ಪುಣ್ಯಸಂ

ಪದದ ಸಂಧ್ಯಾವಂದನಂ ಮಾಡಿ ವಿಹಿತಾರ್ಘ್ಯಪಾದ್ಯಮಂ ನಿರ್ವರ್ತಿಸಿ

ವಿಧಿತ ಶಿವಲಿಂಗ ಪೂಜಾ ಸುಖಮನೆಯ್ದಿ ನಿಯ

ಮದ ದಾನಧರ್ಮಗಳಂ ಮಾಡಿ.....(4–59)

ಹಾಗೆಯೇ ಕಾವ್ಯದ ಬೇರೆ ಬೇರ ಸನ್ನಿವೇಶಗಳಲ್ಲಿ 'ಶಿವಪೂಜೆಗೆಯ್ದು ಯಾಗಂಗಳಂ ನಡೆಸಿ...'ತಾನು ಪುಣ್ಯ ಸಂಪಾದಿಸಿರುವುದಾಗಿಯೂ ಹರಿಶ್ಚಂದ್ರ ಹೇಳಿಕೊಂಡಿದ್ದಾನೆ. (6–45) ಮೇಲಾಗಿ ಹರಿಶ್ಚಂದ್ರ ತನ್ನ ಗುರು ವಶಿಷ್ಠರನ್ನು ಶಿವನೆಂದೇ ಪರಿಭಾವಿಸಿ ಗೌರವಿಸುವವನು, (6–46) ಹರನರ್ನಚಿಸು ದಾನಧರ್ಮವಂ ಮಾಡು.....',(8–28) ಇವು ಹರಿಶ್ಚಂದ್ರ ಗುರುಗಳಿಂದ ಬಯಸುವ ಮಾತುಗಳಾಗಿವೆ. 'ಶಿವ ಪೂಜೆಯಂ ಮಾಡದವನು, ಗುರ್ವಾಜ್ಞೆ ಗೆಟ್ಟವನು.....'(8–56) ನರಕಕ್ಕೆ ಹೋಗುವವರು ಎಂಬುದು ಹರಿಶ್ಚಂದ್ರನ ನಂಬಿಕೆ. ಕಾಶಿಗೆ ಹೋಗುವ ಮಾರ್ಗದಲ್ಲೂ ಸಹ 'ತರುಣಶಶಿಚೂಡನಡಿದಾವರೆಯನರ್ಚಿಸುವುದನ್ನು' ಹರಿಶ್ಚಂದ್ರ ಬಿಡುವುದಿಲ್ಲ. (10–1) ಪುರಾಣಗಳಲ್ಲಿ ಧ್ರುವನಿಗೆ ವಿಷ್ಣು ಮೆಚ್ಚಿ ಬೇರೆ ಲೋಕವನ್ನು ಕರುಣಿಸಿದನೆಂಬ ಕಥೆ ಇದೆ. ಆದರೆ ರಾಘವಾಂಕ ಧ್ರುವನು 'ಶಿವನ ಮೆಚ್ಚಿಸಿ ಬೇರೆ ಲೋಕವಂ ಪಡೆದು' ಎಂದು ವಿಷ್ಣುವಿನ ಬದಲಾಗಿ ಶಿವನನ್ನು ಹರಿಶ್ಚಂದ್ರ ನೆನೆಯುವಂತೆ ಮಾಡಿದ್ದಾನೆ. (10–19) ಅದಲ್ಲದೆ ಎಲ್ಲವನ್ನೂ ಕಳೆದುಕೊಂಡ ಹರಿಶ್ಚಂದ್ರನು ಲೋಹಿತಾಶ್ವನಿಗೆ ತನ್ನ ಆರಾಧ್ಯ ದೈವ ಶಿವ ಕರುಣಿಸಿ ರಾಜ್ಯವನ್ನಾಳುವ ಭಾಗ್ಯವನ್ನು ನೀಡಬಹುದೆಂಬ ಆಶಾಭಾವ ಹೊಂದಿರುತ್ತಾನೆ. 'ಬೇಡುವ್ರೊಡೀವ ಶಿವನುಂಟು ಪಡೆವ ನೀನುಂಟು' (10–19) ಹರಿಶ್ಚಂದ್ರನ ಹೆಂಡತಿ 'ಕೋಟಿ ಭವಭವದೊಳಗೆ..... ತರುಣ ಶಶಿಮೌಳಿಯೇ ದೈವವಾಗಲಿ'(10–24) ಎಂದು ಬಯಸುವವಳು ಮತ್ತು ಹರನಲ್ಲದನ್ಯ ದೈವಕ್ಕೆ ನಮಿಸದವಳು. ಚಂದ್ರಮತಿಯ ಭಾವವೇ ಹೀಗಿರುವಾಗ ಹರಿಶ್ಚಂದ್ರನ ಭಕ್ತಿ ಭಾವ ಅಂತೆಯೇ ಇರಲು ಸಾಧ್ಯವಿದೆ. ಅಥವಾ ಅದಕ್ಕಿಂತ ಹೆಚ್ಚಿರಲು ಸಾಧ್ಯವಿದೆ.

ವಿಶ್ವಾಮಿತ್ರನು ಸೃಷ್ಟಿಸಿದ ಕೃತಕ ಕಾಡ್ಗಿಚ್ಚು ನಂದಿದಾಗ ಹರಿಶ್ಚಂದ್ರ ಮೊದಲು ಹೇಳುವುದೇ 'ಹರಕೃಪೆಯೊಳಗ್ನಿ ಭಯವೆಂತಕ್ಕಿದೊಮ್ಮಿಂಗೆ ಪರಿಹರಿಸಿತು' ಎನ್ನುವ ಮೂಲಕ ಶಿವ ಕಾಪಾಡಿದ ಎಂದು ಸಂತಸಗೊಳ್ಳುತ್ತಾನೆ.( 10–27) ಸ್ವತಃ ನಕ್ಷತ್ರಕನೇ 'ನಿನ್ನಂತೆ ಸತ್ಯರುತ್ತಮರಧಿಕಧೀವಶಿಗಳುನ್ನತ ಶಿವೈಕ್ಯರಿಳೆಯೊಳಗಿಲ್ಲ' ಎಂದು ಹರಿಶ್ಚಂದ್ರನ ಶಿವಭಕ್ತಿಗೆ ಪ್ರಮಾಣ ಪತ್ರ ನೀಡಿದ್ದಾನೆ. (11–29) ಎರಡನೆಯ ರುದ್ರನೆನಿಸುವ 'ವಸಿಷ್ಠನ ಶಿಷ್ಯನರಿದೆನಿಪ ರುದ್ರಾರ್ಚಕಂ, ಗಿರಿಜೆಗಣಕುಲಂ ಬೆರಸು ರುದ್ರನನೆಳೆದು ತಂದು ಕೊಡಲಾರ್ಪ ಸತ್ಯಾಶ್ರಯಂ' (11–39) ಹರಿಶ್ಚಂದ್ರ ಅಪ್ರತಿಮ ಶಿವಭಕ್ತ ಎಂದು ಧ್ವನಿಪೂರ್ವಕವಾಗಿ ಹೇಳಲಾಗಿದೆ. ಸ್ಮಶಾನದಲ್ಲಿ ಮಂತ್ರಿ ಸತ್ಯಕೀರ್ತಿಯು ಗೋಮಯದಲ್ಲಿ ಜೀರ್ಣವಾಗದೆ ಉಳಿದಿದ್ದ ಅಕ್ಕಿಯನ್ನು ತೊಳೆದು ತಂದು ಹರಿಶ್ಚಂದ್ರನಿಗೆ ಕೊಟ್ಟಾಗಲೂ ಸಹ ಹರಿಶ್ಚಂದ್ರ ಲಿಂಗಾರ್ಪಿತ ಮಾಡಿಯೇ ಸವಿಯುತ್ತಿದ್ದ ( 11–45) ಸ್ಮಶಾನದಲ್ಲಿ ಸದಾ 'ಶಿವ ಮೃಡಪದಧ್ಯಾನಾಮೃತವನೀಂಟಿ ತೇಗುತ್ತ ಇದ್ದನು 'ಶರಣರೇನೆಂದುದಂ ಕೊಟ್ಟು ರಕ್ಷಿಸುವ ಶಶಿಧರ ವಿಶ್ವಪತಿಯಂಘ್ರಿ ಕಮಳವನ್ನು ಭಕ್ತಿಯಿಂದೊಲಿದು ಪೂಜಿಸಿ ಮೆಚ್ಚಿಸಿ ಪಿರಿಯ ಸಿರಿಗರಸಾಗಿ'(12-49) ಎನ್ನುವಲ್ಲಿ ಮಗುನನ್ನು ಕಳೆದುಕೊಂಡು ದುಃಖದಲ್ಲೂ ಸಹ ಹರಿಶ್ಚಂದ್ರ ಶಿವನ ಕಾರುಣ್ಯವನು ನನೆದಿದ್ದಾನೆ.( 12–49) ಹಾಗೆಯೇ 14ನೇ

ಯ ಸ್ಥಲದಲ್ಲಿ ಹರಿಶ್ಚಂದ್ರನ ನಿಷ್ಠೆಗೆ ಮೆಚ್ಚಿ ಶಿವ ಪ್ರತ್ಯಕ್ಷನಾದುದಲ್ಲದೆ, ಹರಿಶ್ಚಂದ್ರನಿಗೆ ಎಲ್ಲವೂ ವಾಪಸ್ಸು ದೂರಕುವಂತೆ ಮಾಡುತ್ತಾನೆ. ಅಷ್ಟೇ ಅಲ್ಲದೆ ಶಿವನೇ ಹರಿಶ್ಚಂದ್ರನನ್ನು 'ಗಿರಿಸುತೆಯನಾಲಿಂಗಿಸುವ ಭುಜದೊಳಪ್ಪಿ' ಕೊಳ್ಳುತ್ತಾನೆ.

ಇಷ್ಟೆಲ್ಲಾ ಸಾಲುಗಳನ್ನು ಮುಕ್ತಕದಂತೆ ಬಿಡಿಬಿಡಿಯಾಗಿ ನೋಡಿದರೆ ''ಹರಿಶ್ಚಂದ್ರನ ಅರಸುತನ, ಅರಸೊತ್ತಿಗೆಯನ್ನು ನಿರೂಪಿಸುವ ಷಟ್ಪದಿಗಳ ನಡುವೆ ಈ ಮಾತುಗಳು ನುಸುಳಿ ಮರೆಯಾಗುತ್ತವೆ"[5] ಎಂಬ ಅಭಿಪ್ರಾಯ ಮೂಡುವುದರಲ್ಲಿ ಅನುಮಾನವಿಲ್ಲ. ಆದರೆ ಆಯಾ ಸನ್ನಿವೇಶಗಳ ಹಿನ್ನೆಲೆಯಲ್ಲಿ ಒಟ್ಟಂದದಲ್ಲಿ ನೋಡಿದಾಗ ಈ ಎಲ್ಲಾ ಸಾಲುಗಳೂ ಸಹ 'ವಾಕ್ಯಧ್ವನಿ'ಯಾಗುತ್ತವೆ.ಸ್ವತಃ ಶಿವನೇ ಹರಿಶ್ಚಂದ್ರನನ್ನು ಮೆಚ್ಚಿ ಅಪ್ಪಿಕೊಂಡ ಎಂದು ರಾಘವಾಂಕ ವರ್ಣಿಸಿರುವ ಈ ಸಾಲಿಗಿಂತಲೂ ಹರಿಶ್ಚಂದ್ರ ಶಿವಭಕ್ತ ಎಂಬುದನ್ನು ಸಾಬೀತುಪಡಿಸುವ ವಾಚ್ಯ ಸಾಲುಗಳನ್ನು ನಿರೀಕ್ಷಿಸುವ ಅವಶ್ಯಕತೆಯಿದೆಯೇ?

ಅಡಿ ಟಿಪ್ಪಣಿ:

1.ಅಮರೇಶ ನುಗಡೋಣಿ, ಸಾಮಾಜಿಕ ವಾಸ್ತವವನ್ನು ಮೀರಿದ ಕಾವ್ಯ (ಹರಿಶ್ಚಂದ್ರ ಚಾರಿತ್ರ ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2014 –ಇದರಲ್ಲಿ ಪ್ರಕಟವಾದ ಲೇಖನ) ಪುಟ.7

2.ಅದೇ ಪುಟ.8

3.ಅದೇ ಪುಟ.7

4.ಅದೇ ಪುಟ.7

5.ಅದೇ ಪುಟ.8

**ಆಕರ ಗ್ರಂಥಗಳು:**


1.ಟಿ.ಎಸ್.ವೆಂಕಣ್ಣಯ್ಯ., ಎ.ಆರ್.ಕೃಷ್ಣಶಾಸ್ತ್ರಿ ಸಂ., ಹರಿಶ್ಚಂದ್ರ ಕಾವ್ಯ ಸಂಗ್ರಹ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, 2017

2.ಎನ್.ಬಸವಾರಾಧ್ಯ, ಪಂಡಿತ ಎಸ್ ಬಸಪ್ಪ ಸಂ., ರಾಘವಾಂಕ ವಿರಚಿತ ಹರಿಶ್ಚಂದ್ರ ಕಾವ್ಯಂ, ಪ್ರಾಚ್ಯಕಾವ್ಯ ಪ್ರಕಾಶ ಮಂದಿರ, ಮೈಸೂರು, 1975

3.ಡಾ.ಕೆ.ವೈ.ಶಿವಕುಮಾರ್, ರಾಘವಾಂಕನ ಹರಿಶ್ಚಂದ್ರ ಕಾವ್ಯ ಸಮಗ್ರ ಗದ್ಯಾನುವಾದ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, 1996

4.ಜಿ.ಎಚ್.ನಾಯಕ, ಮೌಲ್ಯ ಮಾರ್ಗ(ಸಂಪುಟ–2),ಸಿರಿವನ ಪ್ರಕಾಶನ, ಬೆಂಗಳೂರು, 2011